ಮಾಡುವವರು ಹೀಗೆ ಯಾರನ್ನು ಕೇಳಿದರೂ, 'ನಾವು ಕಡಿಯುವುದಿಲ್ಲ. ಹಾಗೇನಾದರೂ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ' ಎನ್ನುತ್ತಿದ್ದರು. ಮಲಗಿದಾಗ ಕನಸಿನಲ್ಲೂ ಆ ಮರದ ಕೊಂಬೆಗಳು ಕಿಟಕಿಯಿಂದ ಒಳತೂರಿ ನನ್ನೆಡೆಗೆ ಬರುವಂತೆ ಕಾಣುತ್ತಿತ್ತು. ಮರದ ಕಸದ ವಾಸನೆ ಮೂಗಿಗೆ ಅಡರಿದಂತಾಗಿ ತಟಕ್ಕನೆ ಎಚ್ಚರವಾಗುತ್ತಿತ್ತು. ನಾನೇಕೆ ಆ ಮರದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕು, ಅದರ ಪಾಡಿಗೆ ಅದು ಕಸ ಬೀಳಿಸುತ್ತದೆ, ನಮ್ಮ ಪಾಡಿಗೆ ನಾವು ಅದನ್ನು ಗುಡಿಸಿಹಾಕುವುದು ಎಂದು ಅಂದುಕೊಂಡೆ. ಆದರೆ, ಅದು ಅಷ್ಟು ಸುಲಭವಾಗಿರಲಿಲ್ಲ. ಗುಡಿಸುವಾಗ ವಾಹನವೊಂದು 'ಭರ್' ಎಂದು ಹೋದರೆ ಗುಡಿಸಿ ಒಟ್ಟುಮಾಡಿದ ಪುರುಲೆಯ ಗುಡ್ಡೆಯಿಂದ ಅಷ್ಟೂ ಕಸ ವಾಪಸ್ ಮನೆ ಎದುರು ಬಂದಿರುತ್ತಿತ್ತು. ಬೆಳಗ್ಗೆ ಎಷ್ಟು ಗುಡಿಸಿರುತ್ತೇವೋ ಅಷ್ಟೇ ಕಸ ಮಧ್ಯಾಹ್ನದೊಳಗೆ ಬಿದ್ದಿರುತ್ತಿತ್ತು. ಒಂದು ವಾರದಲ್ಲಿ ನಾಲ್ಕು ಮೂಟೆಯಾಗುವಷ್ಟು ಕಸ! ಮರದ ನೆರಳಿಗೆ ಕುಂಡಗಳಲ್ಲಾಗಲೀ, ನೆಲದಲ್ಲಾಗಲೀ ಒಂದೂ ಗಿಡ ಬೆಳೆಯಲಿಲ್ಲ. ಉದುರಿಬಿದ್ದ ಮರದ ಕಾಯಿಗಳಿಗೆ ಗೆದ್ದಲು ಬರಲಾರಂಭಿಸಿದವು. ಜೊತೆಗೆ ಮರದಿಂದ ಹಾರಿದ ಬೀಜಗಳಿಂದ ಖಾಲಿ ಸೈಟ್‌ನಲ್ಲಿ ಮರಿಗಿಡಗಳು ರಕ್ತಬೀಜಾಸುರನಂತೆ ಹುಟ್ಟಿ ಬೆಳೆಯತೊಡಗಿದವು. ಕೊಂಬೆಗಳು ಅಡ್ಡಾದಿಡ್ಡಿ ಬೆಳೆದು ಎದುರು ಮನೆಯವರ ತಾರಸಿಗೂ ಅದರ ಎಲೆ, ಹೂಗಳು ಬೀಳತೊಡಗಿದವು. ನೀವು ಏನಾದರೂ ಮಾಡಿಕೊಳ್ಳಿ, ಬೆಳೆಯುವುದೊಂದೇ ನನ್ನ ಗುರಿ ಎಂಬಂತೆ ಮರ ಬೆಳೆಯುತ್ತಲೇ ಇತ್ತು.

ಮನೆಯ ತಾರಸಿಯಲ್ಲಿ ಖಾಲಿ ಇದ್ದ ಜಾಗದಲ್ಲಿ ಒಂದು ಕೋಣೆ ಕಟ್ಟುವುದೆಂದುಕೊಂಡು ಎಂಜಿನಿಯರ್‌ಗೆ ಹೇಳಿ ಕೆಲಸ ಆರಂಭಿಸಲಾಯಿತು. ಮನೆಯ ನವೀಕರಣಕ್ಕೆ ಅಡಚಣೆಯಾಗಿದ್ದ ಮರದ ಸಣ್ಣಪುಟ್ಟ ಕೊಂಬೆಗಳನ್ನು ಸ್ವಲ್ಪಸ್ವಲ್ಪವೇ ಸವರುತ್ತಾ ಕಟ್ಟುವ ಕೆಲಸ ಮುಂದುವರೆಯಿತು. ಮರಳು, ಜಲ್ಲಿ, ಸಿಮೆಂಟ್, ಪೈಂಟ್ ಇತ್ಯಾದಿ ಮರದ ಬುಡದಲ್ಲಿ ಬಂದು ಬಿದ್ದಿತ್ತು. ಜೊತೆಗೆ ಕೆಲಸ ಮಾಡುವವರು ಸಾರ್ವೆ ಹಾಕುವುದು, ತೆಗೆಯುವುದು ಮಾಡುತ್ತಿದ್ದುದರಿಂದ ಕಾಂಪೌಂಡಿನೊಳಗೆ ಇಷ್ಟಪಟ್ಟು, ಕಷ್ಟಪಟ್ಟು ಬೆಳೆಸಿದ್ದ ದಾಳಿಂಬೆ ಮರ, ಮಲ್ಲಿಗೆ ಹಾಗೂ ಹಳದಿ ಹೂವಿನ ಬಳ್ಳಿಗಳು, ಮನೆಯ ಹೊರಗೆ ಬೆಳೆಸಿದ್ದ ಹೊಂಗೆಮರ ಎಲ್ಲವೂ ಇವರ ಹಿಂಸೆ ತಾಳಲಾರೆವು ಎಂದುಕೊಂಡವೇನೋ? ಮೂರ್ನಾಲ್ಕು ತಿಂಗಳೊಳಗೆ ಅಷ್ಟೂ ಗಿಡಗಳು ಒಣಗಿ ಸತ್ತೇಹೋದವು. ಪುನಃ ಹೊಸದಾಗಿ ಎಲ್ಲಾ ಗಿಡಗಳನ್ನೂ ನೆಡಬೇಕಷ್ಟೇ. ಆದರೆ, ಎಂದಿನಂತೆ ತನಗೂ ನಿಮ್ಮ ಜಗತ್ತಿಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಕೊಂಬೆಗಳನ್ನು ಚಾಚಿಕೊಂಡು, ಭೂಮಿಯೊಳಗೆ ತನ್ನ ಬೇರನ್ನು ಗಟ್ಟಿಯಾಗಿ ಊರಿ ನಿಂತೇ ಇದೆ ಆ ಮರ! ಅ–ಮರ!!


**ಅರುಣಾ ಕೆ.ಆರ್.**

ಶೃಂಗೇರಿಯವರಾದ ಅರುಣಾ ಬಿ.ಎಸ್ಸಿ., ಕನ್ನಡ ಎಂ.ಎ., ಎಂ.ಫಿಲ್. ಪದವೀಧರೆ. ಕನ್ನಡ ಮತ್ತು ಅಪಭ್ರಂಶ ಭಾಷೆಗಳಲ್ಲಿನ ಹತ್ತನೇ ಶತಮಾನದ ಜೈನ ಕಾವ್ಯಗಳ ಬಗ್ಗೆ ತೌಲನಿಕ ಸಂಶೋಧನಾ ಅಧ್ಯಯನ ಮಾಡಿ ಜೈನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಶಾಂತಿನಾಥ ಕವಿಯ 'ಸುಕುಮಾರ ಚರಿತೆ'ಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. 'ನನ್ನೊಳಗಿನ ಮಲೆನಾಡು' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.